ಓ ಎಸ್ : **156/2017** ಪಿ . ಡಬ್ಲ್ಯೂ-**3**

ಸಾಕ್ಷಿಯನ್ನು ದಿಃ **15.11.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದಃ

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ನನಗೆ ನಿಪಿ.1 ದಾಖಲೆಗೆ ನೋಂದಾಯಿಸಲು ಬಂದಾಗಿನಿಂದ ಪರಿಚಯ. ನಾನು ಬಾಪೂಜಿ ಆಶ್ರಮಕ್ಕೆ ತರಕಾರಿ ಸರಬರಾಜು ಮಾಡುತ್ತಿದ್ದೆ. ಚಂದ್ರಶೇಖರ್ ರವರು ನನಗೆ ಹತ್ತು ವರ್ಷಗಳಿಂದ ಪರಿಚಯ. ನಾನು ಯಾವುದೇ ಕೇಸನ್ನು ಸದರಿಯವರಿಗೆ ನೀಡಿಲ್ಲ. ರಾಜು ರವರು ನನಗೆ 10-15 ವರ್ಷಗಳಿಂದ ಪರಿಚಯ. ವಕೀಲರ ಕಚೇರಿಗೆ ಸುಂದರೇಶ ರವರನ್ನು ನಾನು ಕರೆದುಕೊಂಡು ಹೋಗಿರುತ್ತೇನೆ. 2014 ನೇ ಇಸವಿಯಲ್ಲಿ ಕರೆದುಕೊಂಡು ಹೋಗಿರುತ್ತೇವೆ ದಿನಾಂಕ ನೆನಪಿಲ್ಲ. ವಾರ ಮತ್ತು ಸಮಯ ಸಹ ನೆನಪಿಲ್ಲ. ಸುಂದರೇಶ ರವರ ಆರೋಗ್ಯ ಸರಿಯಿಲ್ಲದ ಕಾರಣ ಬಾಪೂಜಿ ಆಶ್ರಮದಲ್ಲಿ ದಾಖಲು ಮಾಡಿದ್ದರು ಎಂದರೆ ಸರಿ.

ನಿಪಿ.1 ವಿಲ್ ನ್ನು ಬರೆಯಲು ಯಾರು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ದಾಖಲೆಗೆ ಯಾವಾಗ ನೋಂದಣಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಕೀಲರ ಕಚೇರಿಯಲ್ಲಿ ನಿಪಿ.1 ನ್ನು ತಯಾರಿ ಮಾಡಿದ ಸಂದರ್ಭದಲ್ಲಿ ವಕೀಲರು, ಟೈಪಿಸ್ಟ್, ನಾನು ಕಚೇರಿಯಲ್ಲೆದ್ದೆವು. ರಾಜು ಕಚೇರಿಯ ಹೊರಗಡೆ ನಿಂತಿದ್ದರು. ರಾಜು ರವರಿಗೆ ನಿಪಿ.1 ದಾಖಲೆಯ ವಿಚಾರವನ್ನು ಸುಂದರೇಶ ರವರು ಹೇಳಿರುತ್ತಾರೆ. ಸುಂದರೇಶ ವಯಕ್ತಿಕ ಜೀವನ ಬಗ್ಗೆ ಅವರ ವೃತ್ತಿ ಜೀವನದ ಬಗ್ಗೆ ನನಗೆ ಗೊತ್ತಿಲ್ಲ. ಸುಂದರೇಶ ರವರ ಆರೋಗ್ಯ ಸರಿಯಿಲ್ಲದೇ ಇರುವ ಕಾರಣ ನಾನು, ರವಿಕುಮಾರ್, ಚಂದ್ರಶೇಖರ ರವರು ನಿಪಿ.1 ದಾಖಲೆಯನ್ನು ಸೃಷ್ಟಿ

ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿ ನನ್ನ ಸ್ನೇಹಿತರಾದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ**,** ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ**.)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ